**ಪಿ.ಡಬ್ಲ್ಯೂ- 1**

**ದಿನಾಂಕಃ 13-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಜಿ.ಎನ್. ಪ್ರತಿವಾದಿಯರ ಪರ ವಕೀಲರಿಂದಃ**

1. ನಾನು ದ್ವಿತೀಯ ಪಿಯುಸಿವರೆಗೆ ಓದಿರುತ್ತೇನೆ. ನನ್ನ ಗಂಡ ಪೋಲಿಸ ಇಲಾಖೆಯಲ್ಲಿ ಕಾನ್ಸಸ್ಟೇಬಲ್ ಆಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಲು ನಾನು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಸಂಖ್ಯೆ ನನಗೆ ಹೇಳಲಾಗುವುದಿಲ್ಲ. ಸದ್ರಿ ಆಸ್ತಿಯ ಒಟ್ಟು ಕ್ಷೇತ್ರ 13.75 ಆಣೆ ಇರುತ್ತದೆ. ಸದ್ರಿ ಆಸ್ತಿಯು ಪೂರ್ವ-ಪಶ್ಚಿಮ ಮತ್ತು ಉತ್ತರ - ದಕ್ಷಿಣ ಎಷ್ಟು ಅಡಿ ಇದೆ ಎಂದು ಗೊತ್ತಿಲ್ಲ. ದಾವಾಸ್ತಿಯ ಚೆಕ್‌ಬಂದಿ ಗೊತ್ತಿಲ್ಲ. ದಿನಾಂಕಃ 21-06-2019 ರಂದು ಖರೀದಿ ಕರಾರು ಪತ್ರ ಬರೆದುಕೊಡುವ ಕಾಲಕ್ಕೆ ಅಬ್ದುಲ್‌ರಜಾಕ, ಸುಲೇಮಾನ ಮಾಳಗಿ, ಮುಕ್ತಿಯಾರ ವಾಲೀಕಾರ, ಮಲ್ಲೇಶ, ಮಹಾಂತೇಶ ಆಲದಕಟ್ಟಿ ಮತ್ತು ಮಕ್ಬೂಲಸಾಬ ಆಲೂರ ಇವರುಗಳು ಇದ್ದರು. ಇವರುಗಳನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಸದ್ರಿ ಮೇಲೆ ಹೇಳಿದವರ ತಂದೆಯ ಹೆಸರು ಮತ್ತು ಮಲ್ಲೇಶ ಇವರ ಅಡ್ಡಹೆಸರು ಏನು ಎಂದು ನನಗೆ ಗೊತ್ತಿಲ್ಲ. ದಿನಾಂಕಃ 21-06-2019 ರಂದು ಆದಂತಹ ಖರೀದಿ ಕರಾರು ಪತ್ರದ ಸಂಬಂಧ ವ್ಯವಹಾರವು ಅದೇ ದಿನ ಆಗಿರುತ್ತದೆ. ಆ ದಿನ ಸದ್ರಿ ವ್ಯವಹಾರವು ಬೆಳಿಗ್ಗೆ 110-00 ರಿಂದ ಮದ್ಯಾಹ್ನ 01-00 ಘಂಟೆಯವರೆಗೆ ಆಗಿರುತ್ತದೆ. ವ್ಯವಹಾರ ಆಗುವ ಕಾಲಕ್ಕೆ ದಾವಾಸ್ತಿಯ ಮೂಲ ಬೆಲೆ ರೂ.11,00,000/- ಎಂದು ಹೇಳಿದ್ದರು. ಸದ್ರಿ ಮೂಲ ಬೆಲೆಯನ್ನು 1 ನೇ ಪ್ರತಿವಾದಿ, ಮಕ್ಬೂಲಸಾಬ ಆಲೂರ ಮತ್ತು 1 ನೇ ಪ್ರತಿವಾದಿಯ ಬಾವ ಅಬ್ದುಲರಜಾಕ್ ಹೇಳಿದ್ದರು. ಮೊದಲು ನಾನು ರೂ. 8,00,000/- ಗಳಿಗೆ ಕೇಳಿದ್ದೆ. ಸದ್ರಿ ವ್ಯವಹಾರವು ಕೊನೆಗೆ ರೂ. 9,95,101/-ಗಳಿಗೆ ಮುಕ್ತಾಯವಾಯಿತು. ಸದ್ರಿ ವ್ಯವಹಾರವು ಆದ ಸಮಯದಲ್ಲಿ ಬೇರೆಯವರೊಂದಿಗೆ ವ್ಯವಹಾರ ಆಗಿರುತ್ತದೆಯೋ ಇಲ್ಲವೋ ಎಂದು ನನಗೆ

ಗೊತ್ತಿಲ್ಲ. ಸದ್ರಿ ವ್ಯವಹಾರ ಮಾತನಾಡಲು 1 ನೇ ಪ್ರತಿವಾದಿಯ ಮನೆಯಲ್ಲಿ ಸೇರಿದ್ದೆವು. 1 ನೇ ಪ್ರತಿವಾದಿಯ ಸಮಕ್ಷಮ ಯಾವುದೇ ವ್ಯವಹಾರವಾಗಿಲ್ಲ ಮತ್ತು ನಾನು ಯಾವತ್ತು ಅವರ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ.

**2.** ನಿಪಿ-1 ನ್ನು ಎಂ.ಎಂ. ಸರ್ಕಲ್‌ನಲ್ಲಿರುವ ತಹಶೀಲ್ದಾರ ಕಛೇರಿಯಲ್ಲಿ ಬರೆಸಿರುತ್ತೇವೆ. ಸದ್ರಿ ಕಛೇರಿಯಲ್ಲಿರುವವರು ನಿಪಿ-1 ನ್ನು ಬರೆದಿರುತ್ತಾರೆ, ಅವರ ಹೆಸರು ಗೊತ್ತಿಲ್ಲ. ನಾನು ಹಾಜರುಪಡಿಸಿರುವ ನಿಪಿ-1 ಖರೀದಿ ಕರಾರು ಪತ್ರದಲ್ಲಿ ಸದ್ರಿ ಪತ್ರವನ್ನು ಬರೆದವರ ಸಹಿ ಇಲ್ಲ ಎಂದರೆ ಸಾಕ್ಷಿಯು ನಾನು ಸರಿಯಾಗಿ ನೋಡಿಲ್ಲ ಎಂದು ನುಡಿಯುತ್ತಾರೆ. ಸದ್ರಿ ನಿಪಿ-1 ನ್ನು ಟೈಪ್ ಮಾಡಿಸಿರುತ್ತಾರೆ. ಟೈಪ್ ಮಾಡಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಸದ್ರಿ ನಿಪಿ-1 ನ್ನು ತಹಶೀಲ್ದಾರ ಕಛೇರಿಯಲ್ಲಿ ಬರೆದ ಸಮಯದಲ್ಲಿ ಮಕ್ಬೂಲಸಾಬ ಆಲೂರ, ಅಬ್ದುಲರಜಾಕ್, ಮಹಾಂತೇಶ ಆಲದಕಟ್ಟಿ ಸುಲೇಮಾನ ಮಾಳಗಿ, ಮುಕ್ತಿಯಾರ ವಾಲೀಕಾರ ಮತ್ತು ಮಲ್ಲೇಶ ಇವರುಗಳು ಇದ್ದರು.

**3.** ನಿಪಿ-1 ನ್ನು ಬರೆದ ಕಾಲಕ್ಕೆ ಮುಂಗಡ ಹಣ ರೂ.1,00,000/- ಹಣವನ್ನು 1 ನೇ ಪ್ರತಿವಾದಿಯ ಕೈಯಲ್ಲಿ ಕೊಟ್ಟಿರುತ್ತೇನೆ. ಸದ್ರಿ ಹಣವನ್ನು 1 ನೇ ಪ್ರತಿವಾದಿಯ ಮನೆಯಲ್ಲಿಯೇ ಕೊಟ್ಟಿರುತ್ತೇನೆ. ಸದ್ರಿ ಹಣವನ್ನು ನಾನು ಕೊಟ್ಟಿರುತ್ತೇನೆ. ಸದ್ರಿ ರೂ.1,00,000/- ಹಣವು ರೂ.500/- ಮುಖ ಬೆಲೆಯ ರೂ.50,000/-ಗಳ 02 ಕಟ್ಟುಗಳನ್ನು ಕೊಟ್ಟಿರುತ್ತೇನೆ. ನಿಪಿ-1 ಖರೀದಿ ಕರಾರು ಪತ್ರಕ್ಕೆ ಮೊದಲು ಅಬ್ದುಲರಜಾಕ್ ಆಲೂರ ಸಹಿ ಮಾಡಿರುತ್ತಾರೆ. ನಂತರ ಮಹಾಂತೇಶ ಆಲದಕಟ್ಟಿ, ಮುಕ್ತಿಯಾರ ವಾಲೀಕಾರ, ಸಹಿ ಮಾಡಿರುತ್ತಾರೆ. ಸದ್ರಿ ಪತ್ರಕ್ಕೆ ಮಕ್ಬೂಲಸಾಬ ಆಲೂರ, ಸುಲೇಮಾನ ಮಾಳಗಿ ಮತ್ತು ಮಲ್ಲೇಶ ಸಹಿ ಮಾಡಿರುತ್ತಾರೆ. ಸದ್ರಿಯವರುಗಳೆಲ್ಲ 1 ನೇ ಪ್ರತಿವಾದಿಯ ಮನೆಯಲ್ಲಿ ಸಹಿ ಮಾಡಿರುತ್ತಾರೆ. ಮೇಲೆ ಹೇಳಿದವರನ್ನು ಹೊರತುಪಡಿಸಿ ನಿಪಿ-1 ಕ್ಕೆ ಬೇರೆ ಯಾರು ಸಹಿ ಮಾಡಿಲ್ಲ ಎಂದರೆ ಸಾಕ್ಷಿಯು ಇಲ್ಲ, ನನ್ನನ್ನು

ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಸಮಕ್ಷಮದಲ್ಲಿ ವ್ಯವಹಾರವಾಗಿದ್ದು, ಮುಂಗಡ ರೂ.1,00,000/- ಹಣವನ್ನು ನಾನು ಆಕೆಗೆ ನೀಡಿರುತ್ತೇನೆಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

**4.** ನಿಪಿ-1 ರ ಖರೀದಿ ಪತ್ರದಲ್ಲಿರುವ ಸಹಿಯು 1 ನೇ ಪ್ರತಿವಾದಿಯ ಸಹಿಯೇ ಅಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ನಾನು ಮತ್ತು ಮೇಲೆ ಹೇಳಿದ ಎಲ್ಲಾ ಸಾಕ್ಷಿದಾರರು ಸೇರಿಕೊಂಡು ಸೃಷ್ಠಿ ಮಾಡಿ ಅದಕ್ಕೆ ನಾವೇ 1 ನೇ ಪ್ರತಿವಾದಿಯ ಸಹಿಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡನ ಹೆಸರು ಅಕ್ಬರಸಾಬ ಆಲೂರ. ದಾವಾಸ್ತಿಯು ಅಕ್ಬರಸಾಬ ಆಲೂರರವರಿಗೆ ಅವರ ತಂದೆಯಿಂದ ಬಂದಿರುತ್ತದೆ. ಆ ಬಗ್ಗೆ ನಾನು ದಾಖಲೆ ನೋಡಿರುತ್ತೇನೆ. ಯಾವ ದಾಖಲೆಯನ್ನು ನೋಡಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಉತಾರಗಳನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದ್ರಿ ಉತಾರಗಳನ್ನು ಹೊರತುಪಡಿಸಿ ಬೇರೆ ದಾಖಲೆ ನೋಡಿಲ್ಲ.

**5.** ಜಿಆ್ಯಂಡ್‌ಡಬ್ಲೂ-33/2019 ರಲ್ಲಿ ನ್ಯಾಯಾಲಯದಲ್ಲಿ ಅಲ್ಪವಯಿಗಳ ಪರವಾಗಿ ಸಲ್ಲಿಸಿದ್ದು, ಸದ್ರಿ ಪ್ರಕರಣವು ದಿನಾಂಕಃ 22-12-2020 ರಲ್ಲಿ ಆದೇಶವಾಗಿರುತ್ತದೆ ಎನ್ನುವ ವಿಚಾರವನ್ನು ಮಕ್ಬೂಲಸಾಬ ಮತ್ತು ಅಬ್ದುಲರಜಾಕರವರು ತಿಳಿಸಿರುತ್ತಾರೆ. ಜಿ ಆ್ಯಂಡ್ ಡಬ್ಲೂ-33/2019 ನ್ನು 1 ನೇ ಪ್ರತಿವಾದಿಯು ದಾಖಲು ಮಾಡಿಲ್ಲ ಎಂದರೆ ಸರಿಯಲ್ಲ. ಸದ್ರಿ ಪ್ರಕರಣ ಅರ್ಜಿಗೆ ಮಾಡಿರುವಂತಹ ಸಹಿ 1 ನೇ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸಾಕ್ಷಿಯು ಆ ಸಹಿ ಯಾರುದ್ದು ಎಂದು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಜಿ ಆ್ಯಂಡ್ ಡಬ್ಲೂ-33/2019 ಪ್ರಕರಣವನ್ನು ನಾನು, ಮತ್ತು 1 ನೇ ಪ್ರತಿವಾದಿಯ ಗಂಡನ ಸಹೋದರರು ಹಾಗೂ ಸಾಕ್ಷಿದಾರರು ಸೇರಿ

ದಾಖಲು ಮಾಡಿ ಆದೇಶ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದ್ರಿ ಪ್ರಕರಣದಲ್ಲಿ ಆದೇಶವಾದ ನಂತರ 1 ನೇ ಪ್ರತಿವಾದಿಯ ಕುಟುಂಬದ ಸದಸ್ಯರಾದ ಅಬ್ದುಲ್ ರಜಾಕ ಮತ್ತು ಮಕ್ಬೂಲಸಾಬರವರ ಬಳಿ ಖರೀದಿ ಪತ್ರ ನೋಂದಣಿ ಮಾಡಿಕೊಡಿ ಎಂದು ಕೇಳಿದ್ದೆ. ಯಾವ ತಾರೀಖು, ತಿಂಗಳು ಮತ್ತು ಇಸ್ವಿಯಂದು ಆ ರೀತಿ ಕೇಳಿದ್ದೆ ಎಂದು ನನಗೆ ಗೊತ್ತಿಲ್ಲ. ಸದ್ರಿ ವಿಚಾರ ಕೇಳಿದ ಸಮಯದಲ್ಲಿ ನಾನು ಮತ್ತು ನಮ್ಮ ಸಾಕ್ಷಿದಾರರೆಲ್ಲರೂ ಮತ್ತು 1 ನೇ ಪ್ರತಿವಾದಿ ಇದ್ದೆವು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**6**. 1 ನೇ ಪ್ರತಿವಾದಿ ದಾವಾಸ್ತಿಯನ್ನು ನನಗೆ ಖರೀದಿ ಕರಾರು ಪತ್ರ ಮಾಡಿಕೊಡದೆ ಇರುವುದರಿಂದ, ನೋಂದಣಿ ಮಾಡಿಕೊಡುವ ಪ್ರಮೇಯವೇ ಬರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಪಿ-1 ರಂತೆ ಖರೀದಿ ಕರಾರು ಪತ್ರ ಮಾಡಿಕೊಟ್ಟಿಲ್ಲದಿದ್ದರೂ ನಾನು ಮತ್ತು 1 ನೇ ಪ್ರತಿವಾದಿಯ ಗಂಡನ ಸಹೋದರರು ದಾವಾಸ್ತಿಯನ್ನು ಎತ್ತಿಹಾಕಬೇಕೆಂಬ ಉದ್ದೇಶದಿಂದ ನಿಪಿ-1 ನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡನಿಗೆ 03 ಜನ ಸಹೋದರರಿರುತ್ತಾರೆ, ಅವರುಗಳೆಂದರೆ ಅಬ್ದುಲರಜಾಕ, ಮಕ್ಬೂಲಸಾಬ ಮತ್ತು ಮನಸೂರಸಾಬ. 1 ನೇ ಪ್ರತಿವಾದಿಯ ಗಂಡ ಅಕ್ಬರಸಾಬ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆಂದರೆ ಸರಿ. ಸದ್ರಿಯವರು ಮೃತಪಟ್ಟ ನಂತರ ಆತನ ಸಹೋದರರು ಮನೆತನದ ಎಲ್ಲ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯೇ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

**1** ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.